# ಉದ್ಯಾನವನದಲ್ಲಿ ಆರ್ಟ್ ಟೈಮ್ ಎಟ್ ಪಾರ್ಕ್-3 ಕಾರ್ಯಕ್ರಮ




**ಕಲಬುರಗಿ,ಫೆ.17**–ಆರ್ಟ್ ಟೈಮ್ ಎಟ್ ಪಾರ್ಕ್–3 ಎನ್ನುವ ಕಾರ್ಯಕ್ರಮ ನಗರದ ವೀರಶೈವ ಕಲ್ಯಾಣ ಮಂಟಪ ಎದುರುಗಡೆ ಇರುವ ಉದ್ಯಾನವನದಲ್ಲಿ ನಡೆಯಿತು.

ಈ ಕಾರ್ಯಕ್ರಮದ ಉದ್ಘಾಟಕರಾಗಿ ಹಿರಿಯ ಕಲಾವಿದರಾದ ಬಸವರಾಜ್ ಎಲ್ ಜಾನೆ, ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಮುಖ್ಯ ಶಿಕ್ಷಕಿ ಶಶಿಕಲಾ ಎಸ್. ಮೂಲಭಾರತಿ ಹಾಗೂ ರಂಗಕರ್ಮಿ ಶಂಕ್ರಯ್ಯ ಘಂಟಿ ಆಗಮಿಸಿದ್ದರು.

ಪ್ರಸ್ತಾವಿಕವಾಗಿ ಮಾತನಾಡಿದ ಸೂರ್ಯಕಾಂತ್ ನಂದೂರ್ ಅವರು ಇಂತಹ ಕಾರ್ಯಕ್ರಮ ಪ್ರತಿ ತಿಂಗಳು ನಡೆಸಿಕೊಂಡು ಬರುತಲಿದೆ. ಇದು ನಮ್ಮ ಸಮಾನ ಮನಸ್ಕರ ಗುಂಪಿನ ಮೂರನೇ ಕಾರ್ಯಕ್ರಮವಾಗಿದ್ದು, ಇದು ನಗರದ ವಿವಿಧ ಬಡಾವಣೆಗಳಲ್ಲಿ ನಡೆಯಲಿದೆ. ಕಲಾವಿದರು ಹಾಗೂ ಸಾಮಾನ್ಯ ಜನರಿಗೆ ಕಲಾಕೃತಿಗಳ ಕುರಿತು ಪ್ರಜ್ಞೆ ಮೂಡಿಸುವ ಉದ್ದೇಶ ನಮ್ಮದಾಗಿದ್ದು ಸಹೃದಯರು ಕಲಾಕೃತಿಗಳನ್ನು ಆಸ್ವಾದಿಸಿ ಕಡಿಮೆ ದರದಲ್ಲಿ ಕೃತಿಗಳು ಖರೀದಿ ಮಾಡುವಂತಾಗಬೇಕೆಂದು ಎಂಬುದು ಆರ್ಟ್ ಟೈಮ್ ಎಟ್ ಪಾರ್ಕ‌ನ ಬಹಳ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಉದ್ಘಾಟಕರಾಗಿ ಹಿರಿಯ ಕಲಾವಿದರಾದ ಬಸವರಾಜ್ ಎಲ್ ಜಾನೆ ಮಾತನಾಡುತ್ತಾ ಚಿತ್ರಕಲೆ ವಿವಿಧ ಆಯಾಮಗಳು ಹಾಗೂ ಅದರ ಮಾಧ್ಯಮಗಳ ಕುರಿತು ಮಾತನಾಡಿದರು.

ಶಶಿಕಲಾ ಮೂಲ ಭಾರತಿ ಅವರು ಮಾತನಾಡುತ್ತಾ, ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರ ಪಾತ್ರ ಬಹಳ ದೊಡ್ಡದು ಈ ಹಿನ್ನೆಲೆಯಲ್ಲಿ ಚಿತ್ರಕಲಾ ಶಿಕ್ಷಕರ ನೇಮಕವಾಗಬೇಕು. ಮಕ್ಕಳ ಕ್ರಿಯಾಶೀಲ ಬೆಳವಣಿಗೆಗೆ ಹಾಗೂ ಸೃಜನಾತ್ಮಕ ಚಿಂತನೆಗೆ ಹಾಗೂ ಮಾನಸಿಕ ಬೆಳವಣಿಗೆಗೆ ಕಲೆಗಳು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂದು ಹೇಳಿದರು.

ಶಂಕ್ರಯ್ಯ ಘಂಟಿ ಇವರು ಮಾತನಾಡುತ್ತಾ ರಂಗಭೂಮಿ ಹಾಗೂ ದೃಶ್ಯ ಕಲೆ ಒಂದಕ್ಕೊಂದು ಪೂರಕವಾಗಿದೆ ಎಂದು ಮಾತನಾಡುತ್ತಾ , ತಮ್ಮ ಇತ್ತೀಚಿನ ಸಿನಿಮಾ ನಮ್ ಸಾಲಿ ಈ ಚಲನಚಿತ್ರ, ಹಾಗೂ ಅದರ ಕಥೆ, ತಾವು ಪಟ್ಟ ಶ್ರಮ, ಇನ್ನಿತರ ಹಲವಾರು ವಿವರಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಇದು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದಿದ್ದು ಜಿಲ್ಲೆ ಹೆಮ್ಮೆಪಡುವ ಸಂಗತಿಯಾಗಿದೆ. ಅಧ್ಯಕ್ಷೀಯ ಮಾತುಗಳನ್ನಾಡಿದ ಮಂಜುಳಾ ಜಾನೆಯವರು ಸಮಾನಮನಸ್ಕರ್ ಗುಂಪಿನ ಕಾರ್ಯ ಚಟುವಟಿಕೆಗಳ ಬಗ್ಗೆ, ಕಲೆ ಹಾಗೂ ಶಿಕ್ಷಣ ಇನ್ನಿತರ ಹಲವಾರು ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ, ಹಿರಿಯ ಕಲಾವಿದರಾದ ವಿ.ಬಿ. ಬಿರಾದಾರ್, ರಾಮಗಿರಿ ಪೊಲೀಸ್ ಪಾಟೀಲ್, ಡಾ. ಆಕಾಶ್, ಡಾ. ಪರಶುರಾಮ್, ಶ್ರೀ ರಾಕೇಶ್, ಗಿರೀಶ್ ಕುಲಕರ್ಣಿ, ಶಂಕರಗೌಡ ಬಿರಾದಾರ್. ಅಭಿಜಿತ್

ಎಸ್. ಕೆ, ವಿಜಯ್ ಅವ್ರಾದ್, ಡಿ.ಎಸ್. ದೇಸಾಯಿ, ಶಾಂತ ಮಲ್ಲ ಶಿವಭೋ, ಅಂಬಾರಾಯ ಚಿನ್ಮಳ್ಳಿ, ಸವಿತಾ ಕುಂಬಾರ್, ಹೀಗೆ ನಗರದ ಅನೇಕ ಯುವ ಕಲಾವಿದರು, ರೇಖಾಚಿತ್ರ ರಚನೆಗಳ ಕಾರ್ಯಗಾರದ 10 ಜನ ಕಲಾವಿದರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಟ್ಟರು.

# ಬಳ್ಳಾರಿ ಪಾಲಿಕೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ

* 12 ಲಕ್ಷ ರೂಗಳ ಲಂಚದ ಆರೋಪ
* ನಕಲಿ ದಾಖಲೆಗಳಿಂದ ಫಾರಂ 2
* ಬಿಲ್ ಕಲೆಕ್ಟರ್ ಗೋಲ್ ಮಾಲ್, ಅಮಾನತ್ತಿಗೆ ಶಿಫಾರಸ್ಸು, ಇಲಾಖಾ ವಿಚಾರಣೆ
* ಕಂಪ್ಯೂಟರ್ ಆಪರೇಟರ್ ವಜಾ
* ಕಂದಾಯ ವಿಭಾಗದ ಹಲವರು ಭಾಗಿ
* ಫಾರಂ 2 ಮಾಡಿದ್ದು ಈಗ ರದ್ದು
* ಈದ್ಗಾಗೆ ಸೇರಿದಲ್ಲ



**ಬಳ್ಳಾರಿ, ಫೆ.17:** ಮತ್ತೊಮ್ಮೆ ಇಲ್ಲಿನ ಮಹಾನಗರ ಪಾಲಿಕೆಯಲ್ಲಿನ ಕಂದಾಯ ವಿಭಾಗದಿಂದ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಿಗೆ ಬಂದಿದೆ. ಇದರ ಸೂತ್ರ ದಾರ ಬಿಲ್ ಕಲೆಕ್ಟರ್, ಜೊತೆಗೆ ಹಲವರು ಭಾಗಿಯಾಗಿರುವ ಶಂಕೆ. ಬ್ರಷ್ಟಾಚಾರ ಬಯಲಾಗುತ್ತಿದ್ದಂತೆ ಸಿಬ್ಬಂದಿ ವಜಾ ಮತ್ತು ಅಮಾನತ್ತಿಗೆ ಶಿಫಾರಸ್ಸು, ಕೇಸು ದಾಖಲಿಸಲು ಸಿದ್ದತೆ, ಇಲಾಖಾ ವಿಚಾರಣೆಯೂ ಮಾಡಲಿದೆಯಂತೆ.

ನಗರದ ಟಿ ಎಸ್ ನಂ.650 ಗೆ ಸೇರಿದ 46902.67 ಚ.ಮೀಟರ್ ನ ಆಸ್ತಿಗೆ ಪಾಲಿಕೆಯ ಅಧಿಕಾರಿಗಳು ಫಾರಂ 2 ನೀಡಿದ್ದಾರೆ. ಫಾರಂ 2 ನೀಡುವಾಗ ಆ ಆಸ್ತಿಗೆ ಬುಡಾ ಅಪ್ರೂಲ್ ಇರಬೇಕು. ಆದರೆ ಕೊಳಗಲ್ಲಿನ ಪದ್ಮಾವತಿ ಅವರಿಗೆ ಸೇರಿದ ದಾಖಲೆ ತೋರಿಸಿ. ಅಧಿಕಾರಿಗಳನ್ನು ಯಾಮಾರಿಸಿ ಮಾಡಲಾಗಿದೆಯಂತೆ. ಹೀಗೆ ಮಾಡಲು ಪಾಲಿಕೆಯ ಬಿಲ್ ಕಲೆಕ್ಟರ್ ನರೇಶ್ ಪ್ರಭಾವತಿ ಅವರ ಕಡೆಯಿಂದ 12 ಲಕ್ಷ ರೂ ನಗದು ಹಣವನ್ನು ಲಂಚದ ರೂಪದಲ್ಲಿ ಪಡೆದಿರುವುದಾಗಿ ಆರೋಪ ಕೇಳಿ ಬಂದಿದೆ.

ಈ ಬಗ್ಗೆ ಪಾಲಿಕೆಯ ಕಂದಾಯ ಇಲಾಖೆಯ ಆಯುಕ್ತ ನಂದೀಶ್ ಅವರನ್ನು ಪ್ರಶ್ನಿಸಿದರೆ. ನನ್ನನ್ನು ಯಾಮಾರಿಸಿ ಕಳೆದ ಡಿ.24 ರಂದು ನನ್ನ ಅಪ್ರೂಲ್ ಪಡೆಯಲಾಗಿದೆ. ಇದರಲ್ಲಿ ಮುಖ್ಯ ಆರೋಪಿ ಬಿಲ್ ಕಲೆಕ್ಟರ್ ನರೇಶ್ ಇದ್ದು ಆತನನ್ನು ಇಲಾಖೆ ವಿಚಾರಣೆ ಬಾಕಿ ಇರಿಸಿ ಅಮಾನತ್ತಿಗೆ ಶಿಫಾರಸ್ಸು ಮಾಡಿದೆ. ಅಲ್ಲದೆ ನಮ್ಮ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಂಪ್ಯೂಟರ್ ಆಪರೇಟರ್ ಆಗಿದ್ದ ಸ್ನೇಹಳನ್ನು ಕೆಲಸದಿಂದ ವಜಾ ಮಾಡಿದೆ. ಅಲ್ಲದೆ ಫಾರಂ 2 ಮಾಡಿದ್ದು ತಪ್ಪು ಎಂದು ತಿಳಿದ ತಕ್ಷಣ ಕಳೆದ ಒಂದು ವಾರದ ಹಿಂದೆಯೇ ಪಾಲಿಕೆ ಆಯುಕ್ತರ ಗಮನಕ್ಕೆ ತಂದು ರದ್ದು ಮಾಡಿದೆ ಎಂದು ತಿಳಿಸಿದ್ದಾರೆ.

**ನೋಟೀಸ್ ಜಾರಿ:** ಪ್ರಕರಣಕ್ಕೆ ಸಂಬಂಧಿಸಿ ಪ್ರಭಾವತಿ ಅವರಿಗೆ ವಿವರಣೆ ಕೋರಿ ನೋಟೀಸ್ ಜಾರಿ ಮಾಡಿದೆ. ಅವರು ಇದಕ್ಕೆ ಲಂಚ ನೀಡಿದ್ದರೆ ಅವರದೂ ತಪ್ಪಾಗುತ್ತದೆ. ಅವರಿಂದ ವಿವರಣೆ ಪಡೆದು ಕ್ರಿಮಿನಲ್ ಪ್ರಕರಣ ದಾಖಲಿಸಲಿಂದು ನಂದೀಶ್ ಹೇಳಿದ್ದಾರೆ.

ಈ ಪ್ರಕರಣದಲ್ಲಿ ಫಾರಂ 2 ಆಗುವವರೆಗೆ ಪಾಲಿಕೆ ಆಯುಕ್ತರಿಗೆ, ಮೇಯರ್ ಅವರಿಗಾಗಲೀ ಗಮನಕ್ಕೆ ಬರುವುದಿಲ್ಲವಂತೆ.

ಇವರು ಸಹ ಪಾಲುದಾರರೇ..?

ಸಾಮಾನ್ಯವಾಗಿ ಫಾರಂ 2 ಮಾಡುವಾಗ ಬಿಲ್ ಕಲೆಕ್ಟರ್ ಅರ್ಜಿ ಪಡೆದು ಸ್ಥಳ ಪರಿಶೀಲನೆ ಮಾಡಬೇಕು. ಪಂಚನಾಮೆ ಮಾಡಬೇಕು. ಜೋನ್ ಎರೆಡರಲ್ಲಿನ ಈ ಆಸ್ತಿಯನ್ನು ಜೋನ್ ಮೂರಲ್ಲಿ ಫಾರಂ 2 ನಿೀಡಿದಾಗಲೇ ಹಲವು ಅನುಮಾನಕ್ಕೆ ಕಾರಣವಾಗಿದೆ.

ಬಿಲ್ ಕಲೆಕ್ಟರ್ ನಂತರ, ಸಹಾಯಕ ಕಂದಾಯ ಅಧಿಕಾರಿ, ಕಂದಾಯ ಅಧಿಕಾರಿ ಗಳಾದ ವೆಂಕಟೇಶ್, ಲಕ್ಷ್ಮೀನಾರಾಯಣ ಅವರೂ ಸಹ ಪರಿಶೀಲನೆ ಮಾಡಿ ಲಾಗಿನ್ ಕೊಟ್ಟಿದ್ದಾರೆ ಎಂದರೆ ಇವರೂ ಸಹ ಇದರಲ್ಲಿ ಪಾಲುದಾರರೆನ್ನಬೇಕಾಗುತ್ತದೆ.

ಆದರೆ ಇವರು ಲಾಗಿನ್ ಪಡೆದು ಜಿಯೋ ಮೊಬೈಲ್ ಮೂಲಕ ಅಪ್ರೂಲ್ ಮಾಡಲಾಗಿದೆಯಂತೆ. ಲಾಗಿನ್ ಪಿನ್ ಇವರೇಕೆ ಬೇರೆಯವರಿಗೆ ನೀಡಿದರು. ಅದಕ್ಕೇನಾದರೂ ಪ್ರಸಾದ ಪಡೆದಿರಬೇಕು ಎಂಬ ಶಂಕೆ ಮೂಡುತ್ತಿದೆ.

ಈ ಹಿಂದೆ ಆಸ್ತಿ ತೆರಿಗೆಯಲ್ಲಿ ವಂಚನೆ ಮಾಡಿದಂತೆ ಇದರಲ್ಲೂ ವಂಚನೆ ಮಾಡಿರುವವರಿಗೆ ತನಿಖೆ ಮೂಲಕ ಕಠಿಣ ಕ್ರಮ ತೆಗೆದುಕೊಂಡು .ನಮ್ಮ ನಗರದ ಶಾಸಕರ ಅಭೀಪ್ಸೆಯಂತೆ "ಭ್ರಷ್ಟಾಚಾರ ಮುಕ್ತ ಬಳ್ಳಾರಿ" ಮಾಡಬೇಕಿದೆ.

ಇದು ಈದ್ಗಾ ಜಮೀನಾ?

ನಿನ್ನೆ ದಿನ ಪಾಲಿಕೆಯ ಬಿಜೆಪಿ ಸದಸ್ಯರು ಹೊರ ಹಾಕಿದ್ದ ಪ್ರಕರಣ ಈದ್ಗಾಗೆ ಸೇರಿದ ಜಮೀನನ್ನು ಪರಬಾರೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ಆದರೆ ಆ ಜಮೀನಿನ ದಾಖಲೆಗಳು ಲಭ್ಯ ಇರುವಂತೆ ಅದು ಖಾಸಗಿ ಪಟ್ಟಾ ಜಮೀನು. 1939 ರಲ್ಲಿ ಶಾಂತಮ್ಮ ಎಂಬುವವರಿಂದ ಕೆ.ರಂಗಮ್ಮ ಖರೀದಿ ಮಾಡಿದ್ದು. ಅದು ನಂತರ ದಿನಗಳಲ್ಲಿ ಪಾಲಾಗಿ ಪಾರ್ವತಿ ಖಾಂಡ್ರಾ ಸೋಮಣ್ಣ ಅವರಿಗೆ ಭಾಗಕ್ಕೆ ಬಂದಿತ್ತು. ಅವರು ಮಗಳು ಎ. ಪ್ರಭಾವತಿ ಅವರಿಗೆ ದಾನಪತ್ರದ ಮೂಲಕ ನೀಡಿದ್ದಾರೆ.

ಇವರು ಹಾಲಿ ಆಂದ್ರಪ್ರದೇಶದಲ್ಲಿ ವಾಸವಿದ್ದು. ಈದ್ಗಾ ಪಕ್ಕದಲ್ಲಿರುವ ಇವರ ಜಮೀನಿನಲ್ಲಿ ಇದ್ಗಾ ಜಮೀನೆಂದು ಕೆಲವರು ಸತ್ತವರನ್ನು ಹೂಳಿದ್ದಾರೆ. ಇದು ಗೊತ್ತಾಗಿ ಆಕ್ಷೇಪ ಎತ್ತಿದ್ದಾರಂತೆ. ಈ ಜಮೀನು ಮಾರಾಟ ಮಾಡಲು ಹಲವು ವರ್ಷಗಳಿಂದ ಪ್ರಯತ್ನಿಸಿದರೂ. ಜಮೀಮಿನಲ್ಲಿ ಗೋರಿಗಳು ಇರುವುದರಿಂದ ಯಾರೂ ಖರೀದಿಗೆ ಬರದ ಕರಾಣ ಪಾರಂ 2 ಮಾಡಿಸುವ ಪ್ರಯತ್ನ ಮಾಡಿದ್ದಾರಂತೆಮಧ್ಯವರ್ತಿಗಳು 12 ಲಕ್ಷ ರೂ ತೆಗೆದುಕೊಂಡು ನಕಲಿ ದಾಖಲೆಗಳ ಮೂಲಕ ಫಾರಂ 2 ಮಾಡಿಸಿದ್ದರಂತೆ.

ಈ ಮಧ್ಯೆ ಇದು ನಮ್ಮದೆಂದು ವಕ್ಫ ಬೋರ್ಡ್ ನ್ಯಾಯಾಲಯದ ಮೊರೆ ಹೋಗಿದೆ ಎಂದು ಹೇಳಲಾಗುತ್ತಿದೆ. ತನಿಖೆಯಿಂದ ಎಲ್ಲವವುದು ಹೊರ ಬರಬೇಕಿದೆ.

# ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಸದ ಸಾಗರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ




**ಬೀದರ, ಫೆ.17:** ಜಿಲ್ಲೆಯ ಸಮಗ್ರ ಅಭಿವೃದ್ಧಿ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಸಾರ್ವಜನಿಕ ದೂರುಗಳಿಗೆ ತಕ್ಷಣ ಸ್ಪಂದಿಸುವಂತೆ ಹಾಗೂ ವಿಳಂಬ ಧೋರಣೆ ಅನುಸರಿಸುವ ಅಧಿಕಾರಿ ಮತ್ತು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಂಸದರಾದ ಸಾಗರ್ ಖಂಡ್ರೆ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಅವರು ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೇಂದ್ರ ಪುರಷ್ಕೃತ ಯೋಜನೆಗಳ ಅನುಷ್ಠಾನಾ ಪ್ರಗತಿ ಪಶೀಲನೆ ಜಿಲ್ಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ದಿಶಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂಎಬಿಯಾ) ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿವೆ. ರೈತರಿಗೆ ವಿಮೆ ಹಣ ತಲುಪುವಲ್ಲಿ ಆಗುತ್ತಿರುವ ವಿಳಂಬಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಂಸದರು, ಈ ಕುರಿತು ತಕ್ಷಣ ಸಮಗ್ರ ವರದಿ ಸಲ್ಲಿಸಲು ಕೃಷಿ ಅಧಿಕಾರಿಗಳಿಗೆ ಸೂಚಿಸಿದರು.

ಬೇಸಿಗೆ ಸಮೀಪಿಸುತ್ತಿರುವ ಹಿನ್ನೆಲೆ, ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ಈಗಿನಿಂದಲೇ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು. ಜಲ ಜೀವನ್ ಮಿಷನ್ ಯೋಜನೆಯಡಿ ಕಳಪೆ ಕಾಮಗಾರಿ ನಡೆಸಿ ಸಾರ್ವಜನಿಕರಿಗೆ ತೊಂದರೆ ನೀಡಿರುವ ಗುತ್ತಿಗೆದಾರರನ್ನು ತಕ್ಷಣವೇ ಕಪ್ಪು ಪಟ್ಟಿಗೆ ಸೇರಿಸಲು ಕಟ್ಟುನಿಟ್ಟಿನ ಆದೇಶ ನೀಡಿದರು.

ಇತ್ತೀಚೆಗೆ ಔರಾದ್ ಶಾಲೆಯಲ್ಲಿ ಬಿಸಿ ಊಟ ಸೇವನೆಯಿಂದ ಮಕ್ಕಳು ಅಸ್ವಸ್ಥಗೊಂಡ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಸಂಸದರು, ಕಾರಣಕರ್ತರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಜಿಲ್ಲೆಯಲ್ಲಿ ಗರ್ಭಿಣಿಯರಿಗೆ ಸಕಾಲದಲ್ಲಿ ಸಮರ್ಪಕ ಚಿಕಿತ್ಸೆ ಲಭ್ಯವಾಗಬೇಕು. ಜೊತೆಗೆ ಹೆಚ್ಚುತ್ತಿರುವ ಮಾದಕವಸ್ತು ವ್ಯಸನ ತಡೆಗಟ್ಟಲು ಮಾದಕವಸ್ತು ಪುನರ್ವಸತಿ ಕೇಂದ್ರ (ಆಡಿಣಂ Rehabilitation Centre) ಸ್ಥಾಪನೆಗೆ ತಕ್ಷಣ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಈ ವರ್ಷದ ಖಖಐಅ ಮತ್ತು ಕಗಅ ಫಲಿತಾಂಶಗಳಲ್ಲಿ ಜಿಲ್ಲೆ ಗಮನಾರ್ಹ ಸಾಧನೆ ಮಾಡಬೇಕು. ಮಧ್ಯಾಹ್ನದ ಬಿಸಿ ಊಟದ ಗುಣಮಟ್ಟವನ್ನು ಅಧಿಕಾರಿಗಳು ಖುದ್ದಾಗಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಸಂಸದರು ಸೂಚಿಸಿದರು.

ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಅಪಘಾತ ವಲಯಗಳನ್ನು (Black Spot) ಗುರುತಿಸಿ ತಕ್ಷಣ ದುರಸ್ತಿ ಪಡಿಸಬೇಕು. ರೈಲ್ವೆ ನಿಲ್ದಾಣಗಳಲ್ಲಿ ಸ್ವಚ್ಛತೆ ಕಾಪಾಡಿ, ನಡೆಯುತ್ತಿರುವ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ರೈಲ್ವೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

"ಸರ್ಕಾರದ ಯೋಜನೆಗಳು ಕೇವಲ ದಾಖಲೆಗಳಲ್ಲಿ ಸೀಮಿತವಾಗಬಾರದು. ಅವುಗಳ ಲಾಭ ಜನಸಾಮಾನ್ಯರಿಗೆ ತಲುಪಬೇಕು. ಕರ್ತವ್ಯ ಲೋಪ ಎಸಗುವ ಯಾವುದೇ ಅಧಿಕಾರಿಯನ್ನು ಸಹಿಸುವುದಿಲ್ಲ" ಎಂದು ಸಂಸದ ಸಾಗರ್ ಖಂಡ್ರೆ ಸಭೆಯಲ್ಲಿ ಎಚ್ಚರಿಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿಗಲಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಬೀದರ ಮಹಾನಗರ ಪಾಲಿಕೆ ಆಯುಕ್ತರಾದ ಮುಕುಲ್ ಜೈನ್, ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶೀಷ್ ರೆಡ್ಡಿ, ಜಿಲ್ಲಾ ಹಾಗೂ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಸೇರಿದಂತೆ ಆಳಂದ, ಚಿಂಚೋಳಿ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ನಿಜ ಅರ್ಥ ತಿಳಿದು ಶಿವರಾತ್ರಿ ಆಚರಿಸಬೇಕು: ಬ್ರಹ್ಮಾಕುಮಾರಿ ಲೀಲಾ




**ಬೀದರ್: ಫೆ.17:**ದೀಪ್ ಬೆಳಗಿಸಿ ಭಾರತದಲ್ಲಿ ಆಚರಿಸುವ ಅನೇಕ ಹಬ್ಬಗಳಲ್ಲಿ ಮಹಾಶಿವರಾತ್ರಿಯ ವಿಶೇಷ ಮಹತ್ವ ನ್ನು ಪಡೆದುಕೊಂಡಿದೆ.ಎಂದು ರಾಜ್ಯೋಗಿನಿ ಬ್ರಹ್ಮಾ ಕುಮಾರಿ ಲೀಲಾ ಮುಖ್ಯ ಸಂಚಾಲಕಿ, ದಾವಣಗೆರೆ ಅವರು ಹೇಳಿದರು .

ಹಬ್ಬವನ್ನು ಬಹಳ ಭಕ್ತಿ ಭಾವದಿಂದ ಎಲ್ಲರೂ ಎಲ್ಲೆಡೆ ಆಚರಿಸುತ್ತಾರೆ. ಶಿವರಾತ್ರಿ ಎಂಬ ಶಬ್ದದಲ್ಲಿ ರಾತ್ರಿ ಎಂಬ ಪದವು ಅಜ್ಞಾನ ಅಂದಕಾರವನ್ನು ಸೂಚಿಸುತ್ತದೆ. ವರ್ತಮಾನ ಸಮಯದಲ್ಲಿ ನೈತಿಕ ಮಾನವೀಯ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಘೋರ ಅವಹೇಳನೆ ಯಾಗುತ್ತಿದೆ ಶಾಸ್ತ್ರಗಳಲ್ಲಿ ಇದನ್ನೇ ಧರ್ಮಗ್ಲಾನಿ ಎಂದು ವರ್ಣಿಸಲಾಗಿದೆ.

ಪರಮಜೋತಿ ಸ್ವರೂಪನಾದ ಪರಮಾತ್ಮ ಶಿವ ತಂದೆಯು ಈ ಅಂಧಕಾರದ ಜಗತ್ತಿನಲ್ಲಿ ಪುನಃ ಅವತರಿಸಿದ್ದಾರೆ. ಈ ಪೃಥ್ವಿಯ ಮೇಲಿನ ಎಲ್ಲಾ ದುಃಖ ಅ ಶಾಂತಿಯನ್ನು ದೂರ ಮಾಡಲು ಬಂದಿದ್ದಾರೆ .ಮನುಷ್ಯ ಆತ್ಮರೆಲ್ಲರು ಪ್ರೀತಿಯಿಂದ ಅವನನ್ನು ನೆನಪು ಮಾಡಿದಾಗಲೆ ಸುಖ ಶಾಂತಿಯನ್ನು ಅವನಿಂದ ಪಡೆಯಲು ಸಾಧ್ಯ. ಇದೇ ಸಹಜ ರಾಜಯೋಗವಾಗಿದೆ .

ಉಪ ಎಂದರೆ ಹತ್ತಿರ ವಾಸ ಎಂದರೆ ನೆಲೆಸು ಎಂದರ್ಥ ನಮ್ಮ ಮನಸ್ಸು ಬುದ್ಧಿಯಿಂದ ಪರಮಾತ್ಮ ಸಮೀಪವಿರುವದೇ ನಿಜವಾದ ಉಪವಾಸ.

ಮೂರು ದಳದ ಬಿಲ್ವ ಪತ್ರೆಯನ್ನು ಶಿವ ಪರಮಾತ್ಮನಿಗೆ ಅರ್ಪಿಸಲಾಗುತ್ತದೆ .ಇದು ಮನ ವಚನ ಕರ್ಮದಿಂದ ನಾವು ಪರಮಾತ್ಮನಿಗೆ ಸಮರ್ಪಣೆ ಯಾಗುವುದನ್ನು ಸೂಚಿಸುತ್ತದೆ.

ಆಸುರಿ ಪ್ರವೃತ್ತಿಗಳು ಮತ್ತು ಅಜ್ಞಾನವು ನಮ್ಮಲ್ಲಿ ಪ್ರವೇಶಿಸು ದಂತೆ ಜಾಗುತವಾಗಿರುವುದೇ ನಿಜವಾದ ಜಾಗರಣೆ ವಿಕೃತ ಗುಣಗಳು ನಮ್ಮ ಮನಸ್ಸನ್ನು ವಶ ಮಾಡಿಕೊಳ್ಳದಿರಲಿ. ನಾವು ಪಾಪ ಕರ್ಮಗಳಿಗೆ ಬಲಿಯಾಗುವುದು ಬೇಡ. ಏಕೆಂದರೆ ಇದು ನಮಗೆ ದುಃಖವನ್ನು ನೀಡುತ್ತದೆ. ಅಪ ಶಬ್ದಗಳು ನಾಲಿಗೆಯ ಮೇಲೆ ಬಾರದಿರಲಿ .ನಮ್ಮ ಚಲನವಲನಗಳ ಮೇಲೆ ಸದಾ ಗಮನವಿಡುವುದು ಅಥವಾ ಎಚ್ಚರಿಕೆಯಿಂದ ಇರುವುದೇ ಜಾಗರಣೆ.

ಈ ರೀತಿಯಾಗಿ ನಾವೆಲ್ಲರೂ ಈ ವರ್ಷದ ಶಿವರಾತ್ರಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ ತಂದೆ ಶಿವನಿಂದ ಸುಖ ಶಾಂತಿ ಪವಿತ್ರತೆ ಸಮೃದ್ಧಿಯನ್ನು ಪಡೆದುಕೊಳ್ಳೋಣ.

ಅಥಿತಿಗಳಾಗಿ ಆಗಮಿಸಿದ್ದ ನಾಗೇಂದ್ರ ಇಂಜಿನಿಯರ್ ದಾವಣಗೆರೆ ಅವರು ತನ್ನ ಜೀವನದ ಅನುಭವ ಹೇಳಿದರು.

21 ಟ್ರ್ಯಾಕ್ಟರ್ ಗಳಲ್ಲಿ ಶೃಂಗಾರ ಮಾಡಿದ ಶಿವಲಿಂಗಗಳ ಶೋಭಾ ಯಾತ್ರೆ ಶಿವನ ಸಂದೇಶ ಸಾರುತ್ತ ಪ್ರಮುಖ ಬೀದಿಗಳಲ್ಲಿ ಸಾಗಿತು.ಕೊನೆಗೆ ಟ್ರ್ಯಾಕ್ಟರ್ ಮಾಲೀಕರಿಗೆ ದುಶ್ಚಟ ಗಳಿಂದ ದೂರು ಇರಲು ಪ್ರತಿಜ್ಞೆ ಮಾಡಿಸಿಪ್ರಸಾದ ನೀಡಿ ಸನ್ಮಾನಿಸ ಲಾಯಿತು. ಬ್ರಹ್ಮಾಕುಮಾರಿ ರೇಖಾ ಅವರು ಸ್ವಾಗತ, ಬ್ರಹ್ಮಾಕುಮಾರಿ ಶಾಂತ ವಂದನಾರ್ಪಣೆ ಮಾಡಿದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

